ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

# ಬಳ್ಳಾರಿಯಲ್ಲಿ ಸ್ಟೇರಿಂಗ್ ಹಿಡಿದ ನಾರಿಯರು ರಾಜ್ಯಕ್ಕೆ ಮಾದರಿ!



ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಸ್ವಚ್ಛ ಭಾರತ್ ಮಿಷನ್(ಗ್ರಾ), ಜಲಜೀವನ್ ಮಿಷನ್ ಯೋಜನೆಯ ಯಶಸ್ವಿ ಅನುಷ್ಠಾನದಲ್ಲಿ ಗ್ರಾಮೀಣ ಮಹಿಳೆಯರನ್ನು ತೊಡಗಿಸಿಕೊಳ್ಳುವ ಮೂಲಕ ಮಹಿಳೆಯರನ್ನು ಮುನ್ನೆಲೆಗೆ ತರುತ್ತಿದೆ. ಕುಟುಂಬ ನಿರ್ವಹಣೆಯೊಂದಿಗೆ ಮನೆಯ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿದ್ದ ಮಹಿಳೆಯರು ಈಗ ಗ್ರಾಮಗಳ ಶುಚಿತ್ವದಲ್ಲಿ ನಿರತರಾಗಿದ್ದಾರೆ.

ಗ್ರಾಮೀಣ ಭಾಗದಲ್ಲಿ ಸಂಪೂರ್ಣ ಸ್ವಚ್ಛತೆ ಸಾಧಿಸಲು ಘನ ಮತ್ತು ದ್ರವ ತ್ಯಾಜ್ಯದ ವ್ಯವಸ್ಥಿತ ವಿಲೇವಾರಿಗಾಗಿ ಮೀಸಲಿರುವ ವಾಹನಗಳಿಗೆ ಮಹಿಳೆಯರೇ ಸಾರಥಿಯಾಗಿ ಅವುಗಳನ್ನು ಮುನ್ನಡೆಸುವ ಮೂಲಕ ಹಳ್ಳಿಗಳಲ್ಲಿ ಸ್ವಚ್ಛತೆಗೆ ಕೈಜೋಡಿಸಿದ್ದಾರೆ.

**ಬಳ್ಳಾರಿ ಜಿಲ್ಲೆಯ**
**100 ಗ್ರಾ.ಪಂಗಳ ಪೈಕಿ 88**
**ಗ್ರಾಪಂಗಳಲ್ಲಿ ಸ್ವಚ್ಛತಾ ವಾಹನಗಳಿಗೆ ಮಹಿಳೆಯರೇ ಸಾರಥಿಯಾಗಿದ್ದಾರೆ.**



ಜಿಲ್ಲೆಯ ಐದು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬಳ್ಳಾರಿ 25, ಸಂಡೂರು 26, ಸಿರುಗುಪ್ಪ 27, ಕಂಪ್ಲಿ 10 ಹಾಗೂ ಕುರುಗೋಡು ತಾಲೂಕಿನಲ್ಲಿ 12 ಗ್ರಾಪಂಗಳಿವೆ. ಗ್ರಾಮಗಳನ್ನು ಕಸಮುಕ್ತವಾಗಿಸಲು ಸ್ವಚ್ಛ ಭಾರತ್‌ಮಿಷನ್(ಗ್ರಾ) ಯೋಜನೆಯಡಿ ನಾನಾ ಕ್ರಮ ಕೈಗೊಳ್ಳಲಾಗುತ್ತಿದ್ದು , ಅದರಲ್ಲಿ ಸಂಜೀವಿನಿ ಒಕ್ಕೂಟದ ಮಹಿಳೆಯರು ಪಾಲುದಾರರಾಗಿದ್ದಾರೆ.

ಗ್ರಾಮೀಣ ಭಾಗಗಳಲ್ಲಿನ ಕಲುಷಿತ ವಾತಾವರಣ ತಪ್ಪಿಸಿ, ಸ್ವಚ್ಛತೆ ಕಾಪಾಡುವ ಉದ್ದೇಶದೊಂದಿಗೆ, ಕಸದ ಸಮರ್ಪಕ ವಿಲೇವಾರಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು, ಪ್ರತಿಯೊಂದು ಗ್ರಾಪಂಗಳಿಗೆ ತಲಾ ಒಂದು ಸ್ವಚ್ಛತಾ ವಾಹನವನ್ನು ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿಗಾಗಿ ಮೀಸಲಿಡಲಾಗಿದೆ. ಪ್ರತಿನಿತ್ಯ ಆಯಾ ಗ್ರಾಪಂ ವ್ಯಾಪ್ತಿಯಲ್ಲಿ ವಾಹನಗಳು ಸಂಚರಿಸಿ ಮನೆ ಮನೆಗಳಿಂದ ಒಣ ಮತ್ತು ಹಸಿ ಕಸ ಸಂಗ್ರಹಿಸುತ್ತವೆ. ಈ ಕಾರ್ಯಕ್ಕೆ ವಾಹನಗಳ ಚಾಲಕರಾಗಿ ಮಹಿಳೆಯರನ್ನು ನೇಮಕ ಮಾಡಲಾಗಿದೆ.

# ಜಿಲ್ಲೆಯ 100 ಗ್ರಾಪಂಗಳಲ್ಲಿ 88 ಮಹಿಳಾ ಸಾರಥಿಯರು!

ಬಳ್ಳಾರಿ ಜಿಲ್ಲೆಯಲ್ಲಿನ 100 ಗ್ರಾಪಂಗಳ ಪೈಕಿ 88 ಗ್ರಾಪಂಗಳಲ್ಲಿ ಮಹಿಳೆಯರೇ ಸ್ವಚ್ಛತಾ ವಾಹನದ ಸಾರಥಿಗಳಾಗಿದ್ದಾರೆ. ಇವರಿಗೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರದಿಂದ ನಿರಂತರವಾಗಿ ಮೂರು ತಿಂಗಳ ಕಾಲ ತರಬೇತಿ ಹಾಗೂ ಚಾಲನಾ ಪರವಾನಗಿಯನ್ನು ನೀಡಿ ಕರ್ತವ್ಯಕ್ಕೆ ನೇಮಿಸಿಕೊಳ್ಳಲಾಗಿದೆ.

ಸ್ವಚ್ಛತಾ ವಾಹನಗಳಿಗೆ ಮಹಿಳಾ ಚಾಲಕಿಯೊಂದಿಗೆ ಸಹಾಯಕಿಯರಾಗಿ ಇಬ್ಬರು ಮಹಿಳಾ ಸಿಬ್ಬಂದಿಯನ್ನು ಸಹ ನೇಮಿಸಲಾಗಿದೆ. ಇನ್ನು, ಗಣಿಗಾರಿಕೆಗೆ ಹೆಸರುವಾಸಿಯಾಗಿರುವ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲೂ ಮೈನಿಂಗ್ ಲಾರಿಗಳ ಅಬ್ಬರದ ನಡುವೆ ಮಹಿಳಾ ಚಾಲಕಿಯರು ಎದೆಗುಂದದೆ ಸವಾಲಿನೊಂದಿಗೆ ಪ್ರತಿನಿತ್ಯ ತ್ಯಾಜ್ಯ ಸಂಗ್ರಹ ಕಾರ್ಯದಲ್ಲಿ ನಿರತರಾಗಿದ್ದು, ಎಲ್ಲರಿಗೂ ಮಾದರಿಯಾಗಿದ್ದಾರೆ.

ಸ್ವಚ್ಛ ಭಾರತ ಯೋಜನೆಯಡಿ ಪ್ರತಿ ಗ್ರಾಪಂಗೆ ವಿತರಿಸಿದ ವಾಹನಗಳಿಗೆ ಮಹಿಳೆಯರನ್ನು ಆಯ್ಕೆ ಮಾಡಿಕೊಂಡು, ತರಬೇತಿ ನೀಡಿ ವಾಹನಕ್ಕೆ ಚಾಲಕಿಯಾಗಿ ನೇಮಿಸಲಾಗಿದೆ. ಇದರಿಂದ ಗ್ರಾಮೀಣ ಭಾಗದ ಸ್ವಚ್ಛತೆಗೆ ಮಹಿಳೆಯರು ಸಹ ಕೈಜೋಡಿಸುವ ಮೂಲಕ ಪ್ರೇರಣೆಯಾಗಿದ್ದಾರೆ.

**- ಎಂ.ರಾಜೇಂದ್ರ,**
ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ,
ಎನ್‌ಆರ್‌ಎಲ್‌ಎಂ, ಜಿಪಂ ಬಳ್ಳಾರಿ